## ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದ ನಡವಳಿಗಳು

ವಿಷಯ: ಉರ್ದು DTP ಕೋರ್ಸ್ ಕಲಿಯುತ್ತಿರುವ ಅಲ್ಪಸಂಖ್ಯಾತರ ಮುಸ್ಲಿಂ ಹೆಣ್ಣು ಮಕ್ಕಳಿಗೆ ಶಿಷ್ಯ ವೇತನ ಮಂಜೂರಾತಿ ಬಗ್ಗೆ

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: RD 31 WGA 1991, ದಿನಾಂಕ: 27.03.1992

2. ದಿನಾಂಕ: 06.10.2009ರಂದು ನಡೆದ ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದ ಸಭೆಯ ನಡವಳಿ

ಪ್ರಸ್ತಾವನೆ:

ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದ ಸಭೆಯು ದಿನಾಂಕ: 06.10.2009ರಂದು ಮಾನ್ಯ ವಕ್ಫ್, ಹಜ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ನಡೆಸಲಾಗಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ತೀರ್ಮಾನ ಕೈಗೊಂಡು ಉರ್ದು DTP ಕೋರ್ಸ್ ಕಲಿಯುತ್ತಿರುವ ಅಲ್ಪಸಂಖ್ಯಾತರ ಮುಸ್ಲಿಂ ಹೆಣ್ಣು ಮಕ್ಕಳಿಗೆ ಶಿಷ್ಯ ವೇತನವನ್ನು ನೀಡಿ ಉರ್ದು ಭಾಷೆಯ ಬೆಳವಣಿಗೆಗಾಗಿ ಪ್ರೋತ್ಸಾಹ ನೀಡಬೇಕೆಂದು ಉದ್ದೇಶಿಸಲಾಗಿದ್ದು, ಸದರಿ ಕೋರ್ಸ್‌ನಲ್ಲಿ ಕಲಿಯುತ್ತಿರುವ ಮುಸ್ಲಿಂ ಹೆಣ್ಣು ಮಕ್ಕಳಿಗೆ ರೂ. 2,000ರಂತೆ ಶಿಷ್ಯ ವೇತನವನ್ನು NGO/ಸಂಸ್ಥೆ ಮುಖಾಂತರವಾಗಿ ನೀಡಬೇಕೆಂದು ಪ್ರಸ್ತಾಪಿಸಲಾಗಿದೆ.

ಸದರಿ ಪ್ರಸ್ತಾವನೆಯ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಕೆಲವು ಷರತ್ತುಗಳನ್ನು ವಿಧಿಸಿ, ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದ ಯೋಜನೆಯಡಿಯಲ್ಲಿ ಉರ್ದು DTP ಕೋರ್ಸ್ ಕಲಿಯುತ್ತಿರುವ ಅಲ್ಪಸಂಖ್ಯಾತರ ಮುಸ್ಲಿಂ ಹೆಣ್ಣುಮಕ್ಕಳಿಗೆ ಶಿಷ್ಯ ವೇತನ ನೀಡಬೇಕೆಂದು ನಿರ್ಧರಿಸಲಾಗಿದೆ. ಆದ್ದರಿಂದ ಈ ಆದೇಶ

**ಸರ್ಕಾರದ ಆದೇಶ ಸಂಖ್ಯೆ: MWD 91 WFW 2009, ಬೆಂಗಳೂರು ದಿ: 03-11-2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನ ಯೋಜನೆಯಡಿಯಲ್ಲಿ **ಉರ್ದು DTP ಕೋರ್ಸ್ ಕಲಿಯುತ್ತಿರುವ ಅಲ್ಪಸಂಖ್ಯಾತರ ಮುಸ್ಲಿಂ ಹೆಣ್ಣು ಮಕ್ಕಳಿಗೆ ಶಿಷ್ಯ ವೇತನವನ್ನು** NGO/ಸಂಸ್ಥೆ ಮುಖಾಂತರವಾಗಿ ನೀಡಲು 2009-10ನೇ ಸಾಲಿನಿಂದ ಅನುದಾನವನ್ನು ಮಂಜೂರು ಮಾಡಲು ಈ ಕೆಳಕಂಡಂತೆ ಆದೇಶಿಸಿದೆ.

1. ಸಂಸ್ಥೆಗಳಲ್ಲಿ ಉರ್ದು DTP ಕೋರ್ಸ್ ಕಲಿಯುತ್ತಿರುವ ಅಲ್ಪಸಂಖ್ಯಾತರ ಮುಸ್ಲಿಂ ಹೆಣ್ಣು ಮಕ್ಕಳು ಅರ್ಜಿಗಳನ್ನು ಸಲ್ಲಿಸಲು ಅರ್ಹರಿರುತ್ತಾರೆ.
2. ಸದರಿ ಕೋರ್ಸ್ ಕಲಿಯುತ್ತಿರುವ ಅಲ್ಪಸಂಖ್ಯಾತರ ಮುಸ್ಲಿಂ ಹೆಣ್ಣು ಮಕ್ಕಳಿಗೆ ರೂ. 2,000ಗಳ ಶಿಷ್ಯ ವೇತನವನ್ನು NGO/ಸಂಸ್ಥೆಗಳ ಮುಖಾಂತರ ನೀಡಲಾಗುವುದು.
3. ಸದರಿ ಕೋರ್ಸ್‌ನ ಅವಧಿ ಕನಿಷ್ಠ 6ತಿಂಗಳಾಗಿರಬೇಕು
4. ಅರ್ಜಿಗಳನ್ನು ಸಂಬಂಧಿತ ಸಂಸ್ಥೆಗಳ ಮೂಲಕ ದೃಢೀಕರಣದೊಂದಿಗೆ ಪ್ರತಿಷ್ಠಾನಕ್ಕೆ ಕಳುಹಿಸುವುದು.
5. ಚೆಕ್ಕುಗಳನ್ನು ಸಂಬಂಧಿತ ಅಭ್ಯರ್ಥಿಗಳಿಗೆ NGO ಸಂಸ್ಥೆಗಳ ಮೂಲಕ ನೀಡಲಾಗುವುದು.